**<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಸಿರುಗುಪ್ಪ</u>**

**<u>ಸಿ.ಸಿ.971/2025</u>**

**ಫಿರ್ಯಾದುದಾರರು:** ಹೆಚ್.ಹನುಮಂತಪ್ಪ ಬಿನ್ ಮಾಯಪ್ಪ,
ವಯಸ್ಸು: **52** ವರ್ಷ, ವ್ಯವಸಾಯ,
ವಾಸ: **6/129** ಮೇನ್ ರಸ್ತೆ, ನಾಗಲಾಪುರ ಗ್ರಾಮ,
ಸಿರುಗುಪ್ಪ ತಾ: ಬಳ್ಳಾರಿ ಜಿಲ್ಲೆ.

ವಿರುದ್ಧ

**ಆರೋಪಿ:** ಶ್ರೀಮತಿ ಎನ್.ನಾಗಮ್ಮ ಕೋಂ ದೇವರಾಜ ಜೆ.,
ವ: 42 ವರ್ಷ, ವಾಸ: ಹೊನ್ನೂರಸ್ವಾಮಿ ದರಗ ಹತ್ತಿರ,
ಕುರುಕೋಡು ಪೋ/ಟೌ: ಕುರುಗೋಡು ತಾ:
ಬಳ್ಳಾರಿ ಜಿಲ್ಲೆ.

<u>ಕಲಂ 313 ದಂಡ ಪ್ರಕ್ರಿಯಾ ಸಂಹಿತೆ ಅಡಿ ಆರೋಪಿಯ ಹೇಳಿಕೆ:-</u>

**ಪ್ರಶ್ನೆ1)** : ಇದುವರೆಗೂ ಫಿರ್ಯಾದುದಾರರ ಪರ ಸಾಕ್ಷಿ ವಿಚಾರಣೆಯನ್ನು ಆಲಿಸಿದ್ದೀರಾ?

**ಉತ್ತರ:**

**ಪ್ರಶ್ನೆ2)** ಪ್ರಾಸಾ-1/ಹೆಚ್.ಹನುಮಂತಪ್ಪ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಪಿರ್ಯಾದುದಾರರಿಂದ ರೂ.**8,00,000/-** ಹಣವನ್ನು ದಿನಾಂಕ 18.01.2025 ರಂದು ಸಾಲವಾಗಿ ಪಡೆದಿರುವುದಾಗಿ, ಸದರಿ ಹಣವನ್ನು ಮೂರು ತಿಂಗಳೊಳಗಾಗಿ ವಾಪಸ್ಸು ನೀಡುವುದಾಗಿ ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತೀರಿ. ಅದಕ್ಕೆ ನೀವೇನು ಹೇಳುವಿರಿ?

ಉತ್ತರ:-

ಪ್ರಶ್ನೆ3) ಸದರಿ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಗೆ ಸದರಿ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದಾಗ ಸದರಿ ಆರೋಪಿಯು ಸದರಿ ಹಣದ ತೀರುವಳಿಗಾಗಿ ಕರ್ನಾಟಕ ಗ್ರಾಮೀಣ್ ಬ್ಯಾಂಕ್, ಕುರುಗೋಡು ಶಾಖೆಗೆ ಸೇರಿದ ತನ್ನ ಬ್ಯಾಂಕ್ ಖಾತೆಗೆ

ಸೇರಿದ ಚೆಕ್ ನಂ.007285 ನೇದ್ದನ್ನು ದಿನಾಂಕ 17.04.2025 ಕ್ಕೆ ರೂ.8,00,000/- ಗಳಿಗೆ ನೀಡಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆ4) ಸದರಿ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಆರೋಪಿಯು ನೀಡಿದ ಚೆಕ್ಕನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಿರುಗುಪ್ಪ ಶಾಖೆಗೆ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಆರೋಪಿಯ ಖಾತೆಯನ್ನು ಪರಿಶೀಲಿಸಿ ಚೆಕ್ಕನ್ನು ಮಾನ್ಯ ಮಾಡಲು ಆರೋಪಿಯ ಖಾತೆಯಲ್ಲಿ '**Funds insufficient**' ಎಂಬ ಹಿಂಬರಹದೊಂದಿಗೆ ವಾಪಸ್ಸು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆ5) ಸದರಿ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ವಿಚಾರವಾಗಿ ದಿನಾಂಕ 29.04.2025 ರಂದು ಆರೋಪಿಗೆ ವಕೀಲರ ಮೂಲಕ ತಿಳುವಳಿಕೆ ಪತ್ರವನ್ನು ನೀಡಿದ್ದು, ಸದರಿ ತಿಳುವಳಿಕೆ ಪತ್ರ ಆರೋಪಿಗೆ ಖುದ್ದು ಜಾರಿಯಾಗಿದ್ದರೂ ಸಹ ಆರೋಪಿಯು ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ6)** ಈ ಮೊಕದ್ದಮೆಯಲ್ಲಿ ನಿಮ್ಮ ಪರ ಯಾರನ್ನಾದರೂ ಸಾಕ್ಷಿಗಳನ್ನಾಗಿ ವಿಚಾರಣೆ ಮಾಡುತ್ತೀರಾ?

**ಉತ್ತರಃ**

**ಪ್ರಶ್ನೆ7)** ಈ ಮೊಕದ್ದಮೆಯಲ್ಲಿ ನೀವು ಮತ್ತೇನಾದರೂ ಹೇಳುವುದಿದೆಯೇ?

**ಉತ್ತರಃ**

(ದಿನಾಂಕ 05.05.2026 ರಂದು ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಪಡೆದುಕೊಂಡು ಮೇಲ್ಕಂಡ ಪ್ರಶ್ನೆಗಳಿಗೆ ಆರೋಪಿಯು ತಮ್ಮ ಸ್ವ ಇಚ್ಛೆಯಿಂದ ಕೊಟ್ಟ ಹೇಳಿಕೆಗಳಾಗಿರುತ್ತವೆ ಅಂತ ನಾನು ದೃಢೀಕರಿಸುತ್ತೇನೆ).

( ಅಶೋಕ ಆರ್. ಎಚ್.)

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ.,**ಸಿರುಗುಪ್ಪ.